# ಗೃಹಸ್ಥರಿಗೆ ಭಗವದ್ಗೀತಾ

ಸ್ವಾಮಿ ಸುನಿರ್ಮಲಾನಂದ

ಭಗವದ್ಗೀತೆಯು ಒಂದು ಸಮಗ್ರವಾದ ಸಾಧನ ಗ್ರಂಥ. ಸಂನ್ಯಾಸಿಗಳಿಗೂ, ಗೃಹಸ್ಥರಿಗೂ ಸಮಾನವಾಗಿ ಪೂಜ್ಯವಾದ ಮಾರ್ಗ ದರ್ಶಕ ಕೃತಿಯಿದು. ಜನಸಾಮಾನ್ಯರಿಗೆ ದೈನಂದಿನ ಜೀವನದಲ್ಲಿ ಆಚರಿಸಲು ಅನುಕೂಲವಾಗುವಂತಹ ಹಲವು ಉಪದೇಶಗಳನ್ನು ಗೀತೆಯಲ್ಲಿ ಕಾಣುತ್ತೇವೆ. ಈ ಕುರಿತು ಇಲ್ಲಿ ಬೆಳಕು ಚೆಲ್ಲುವ ಲೇಖಕರು ನೆದರ್‌ಲ್ಯಾಂಡ್ಸ್ (ಹಾಲೆಂಡ್) ರಾಮಕೃಷ್ಣ ವೇದಾಂತ ಸೊಸೈಟಿಯ ಅಧ್ಯಕ್ಷರಾಗಿದ್ದಾರೆ.

ಭಗವದ್ಗೀತೆಯ ಬಗ್ಗೆ ಹೇಳಲು ಅಥವಾ ಬರೆಯಲು ಇನ್ನೇನೂ ಉಳಿದಿಲ್ಲ. ಸಾವಿರಾರು ಪುಸ್ತಕಗಳು ಪ್ರಕಟವಾಗಿವೆ. ಭಗವದ್ಗೀತೆಯನ್ನು ಓದುವವರಿಗಿಂತ ಅದರ ಬಗ್ಗೆ ಬರೆಯುವವರು ಮತ್ತು ವಿಶ್ಲೇಷಣೆ ಮಾಡುವವರೇ ಹೆಚ್ಚು. ಇತ್ತೀಚೆಗೆ ಸೋಶಿಯಲ್ ಮೀಡಿಯಾದಲ್ಲಿ ಬಹಳ ಪಂಡಿತರು ಗೀತೆ ಉಪನಿಷತ್ತು ಇತ್ಯಾದಿಗಳ ಬಗ್ಗೆ ಬರೆಯುತ್ತಿದ್ದಾರೆ. ಹಾಗಾಗಿ ಗೀತೆ ಮತ್ತೊಮ್ಮೆ ಜನಸಾಮಾನ್ಯರ ಮನೆ-ಮನಗಳನ್ನು ತಲುಪುತ್ತಿದೆ.

ಆತ್ಮ, ಬ್ರಹ್ಮ, ಮುಕ್ತಿ, ಮೋಕ್ಷ ಇತ್ಯಾದಿ ದೊಡ್ಡ ದೊಡ್ಡ ಶಬ್ದಗಳನ್ನು ನೋಡಿದರೆ ಅಥವಾ ಕೇಳಿದರೆ ಬಹಳ ಜನರಿಗೆ ಭಯವಾಗುವುದು ಸಹಜ. ಹಾಗಾಗಿ ''ಧರ್ಮಗ್ರಂಥ'' ಎಂಬ ಬಿರುದು ಪಡೆದು ಭಗವದ್ಗೀತೆ ಸ್ವಲ್ಪ ಮೂಲೆಗೆ ಸೇರುವುದು ಸ್ವಾಭಾವಿಕ. ಆದರೆ ಭಗವದ್ಗೀತೆ ರಣರಂಗ ಗೀತೆ. ಯೋಧರ ಗೀತೆ. ರಣಕ್ಷೇತ್ರದಲ್ಲಿ ಸೈನಿಕರು ಕೇಳಿದ, ಸೇನಾಧ್ಯಕ್ಷರಿಗಾಗಿ ಹಾಡಿದ ಗೀತೆ. ಇದು ಬರೀ ''ಧರ್ಮಗ್ರಂಥ'' ಅಲ್ಲ.

ರಣರಂಗ ಈಗಿಲ್ಲ ನಿಜ. ಆದರೆ ಗೃಹಸ್ಥರ ಜೀವನ ಒಂದು ರಣರಂಗವೇ ಸರಿ. ಬೆಳಗಿನಿಂದ ರಾತ್ರಿಯವರೆಗೆ ಯುದ್ಧ ನಡೆದೆ ಇರುತ್ತದೆ. ಕೆಲಸದಲ್ಲಿ ಸಂಗ್ರಾಮ, ಸಂಸಾರ ನಿರ್ವಹಣೆಯಲ್ಲಿ ಸಂಗ್ರಾಮ, ಮಕ್ಕಳಿಗೆ ಸರಿಯಾದ ಶಿಕ್ಷಣ ನೀಡಲು ಯುದ್ಧ, ನೌಕರಿಗಾಗಿ ಯುದ್ಧ, ಎಲ್ಲೆಲ್ಲಿಯೂ ಯುದ್ಧ. ಆರಕ್ಷಣೆಯ ಈ ದಿನಗಳಲ್ಲಿ ಯೋಗ್ಯತೆ ಮತ್ತು ದಕ್ಷತೆಗಳಿಗೆ ಯಾವುದೇ ಗೌರವ ವಿಲ್ಲ. ಹಾಗಾಗಿ ನಿರಂತರ ಯುದ್ಧ. ಜನಸಂಖ್ಯೆ ಅತ್ಯಧಿಕವಾದಾಗ, ಪಕ್ಕದ ದೇಶಗಳಿಂದ ಜನವಸತಿ ಮಿತಿಮೀರಿದಾಗ, ಮೈನಾರಿಟಿ ಇತ್ಯಾದಿ ವಿಚಿತ್ರ ಕಾನೂನುಗಳ ಪರಿಣಾಮವಾಗಿ ಯೋಗ್ಯತೆಗೆ ಯಾವುದೇ ಬೆಲೆ ಇಲ್ಲವಾದಾಗ ಯುದ್ಧವಾಗದೆ ಇನ್ನೇನು ಸಾಧ್ಯ ?

ಈ ಯುದ್ಧಕ್ಷೇತ್ರದಲ್ಲಿ ಕೆಲಸಮಾಡುವ ಸೈನಿಕರಿಗೆ, ಅರ್ಥಾತ್ ಗೃಹಸ್ಥರಿಗೆ, ದಿಕ್ಕು ತಪ್ಪಿದಂತೆ ಆಗುವುದು ಸ್ವಾಭಾವಿಕ. ಕಾರಣ, ಯಾರು ತಾನೇ ಅವರಿಗೆ ನ್ಯಾಯ ಕೊಡಬಲ್ಲರು? ಸಂವಿಧಾನವೇ ಯೋಗ್ಯತೆಗಿಂತ ಆರಕ್ಷಣೆಗೆ (reservation) ಹೆಚ್ಚು ಪ್ರಾಧಾನ್ಯ ನೀಡಿದಾಗ ಯಾರು ತಾನೇ ನ್ಯಾಯ ಪಡೆಯ



ಬಲ್ಲರು? ಹಾಗಾಗಿ ಯುದ್ಧ ನಡೆದರೂ ಯೋಧರಿಗೆ ಬೆಂಬಲವಿಲ್ಲ ದಿಕ್ಕು ತೋಚದ ಪರಿಸ್ಥಿತಿ.

ಇದು ಇಂದಿನ ಹಿಂದಿನ ಮತ್ತು ಮುಂದಿನ ಗೃಹಸ್ಥರ ಪರಿಸ್ಥಿತಿ. ಅವರಿಗೆ ಗೀತೆಯ ಉಪದೇಶ ಏನು? ಈ ಪ್ರಶ್ನೆಗೆ ಉತ್ತರ ಬರೆಯುವ ಮೊದಲು ಮತ್ತೊಂದು ಪ್ರಶ್ನೆ: ಭಗವದ್ಗೀತೆಯ ಉಪದೇಶವೇ ಏಕೆ?

ಭಗವದ್ಗೀತೆ ಹಿಂದೆಯೇ ಹೇಳಿದಂತೆ, ಧ್ಯಾನಮಗ್ನರಾದ ಋಷಿಮುನಿಗಳ ಅರಣ್ಯ ಉಪದೇಶ ಅಲ್ಲ. ಭಗವದ್ಗೀತೆ ರಣರಂಗದ ಕಹಳೆ. ಸಹಸ್ರಾರು ವರ್ಷಗಳಿಂದ ಲಕ್ಷಾಂತರ ಜನರಿಗೆ ಸ್ಫೂರ್ತಿ ನೀಡುತ್ತಿರುವ ಗ್ರಂಥ. ಹಾಗಾಗಿ ಭಗವದ್ಗೀತೆಯು ಬಹಳ ವರ್ಷಗಳ ಪರೀಕ್ಷೆ ನಿರೀಕ್ಷೆಗಳ ನಂತರ ದೃಢಭೂಮಿಯಲ್ಲಿ ನಿಂತಿದೆ. ನಿಸ್ಸಂದೇಹ ಮನಸ್ಸಿನಿಂದ ಈ ಪವಿತ್ರ ಗ್ರಂಥದ ಅನುಸರಣೆ ಮಾಡಬಹುದು.

ಭಗವದ್ಗೀತೆ ಗೃಹಸ್ಥರಿಗೆ ನೀಡುವ ಮೊದಲನೆಯ ಉಪದೇಶ: 'ಭಯಪಡಬೇಡ'. ಭಯದಿಂದಲೇ ನಮ್ಮ ಸಕಲ ಸಮಸ್ಯೆಗಳ ಉದಯ. ಹದಗೆಟ್ಟ ಪರಿಸ್ಥಿತಿ ಇರಬಹುದು, ತಲ್ಲಣಿಸುವಂತಹ ಪರಿಸ್ಥಿತಿ ಇರಬಹುದು, ಆದರೆ ಭಯಪಡಬೇಕಿಲ್ಲ. ಭಯಪಟ್ಟರೆ ನಮ್ಮ ಸಮಸ್ಯೆಗಳು ಕಡಿಮೆಯಂತೂ ಆಗುವುದಿಲ್ಲ, ಆದರೆ ನಮ್ಮ ಭಯ ಅವುಗಳಿಗೆ ಅಸ್ತ್ರ ಶಸ್ತ್ರ ನೀಡಿದಂತೆ ಆಗುತ್ತದೆ.

ಭಗವದ್ಗೀತೆಯ ಎರಡನೇ ಉಪದೇಶ: 'ನಿರಂತರವಾಗಿ ಯುದ್ಧ ಮಾಡು'. ಎರಡು ದಿನ ಸಾಹಸ, ಮೂರನೆಯ ದಿನ ನಿದ್ರೆ ಅಥವಾ ಆಲಸ್ಯ. ಹಾಗಾದರೆ ಯುದ್ಧದಲ್ಲಿ ಯಶಸ್ಸು ಸಿಗುವುದಿಲ್ಲ. ದೃಢತೆ, ಸತತ ಪ್ರಯತ್ನ!

ಭಗವದ್ಗೀತೆಯ ಮೂರನೆಯ ಉಪದೇಶ: 'ಪಲಾಯನ ಮಾಡಬೇಡ.' ಹೆಚ್ಚಿನ ಜನರು ಸಮಸ್ಯೆಗಳನ್ನು ಎದುರಿಸಲಾಗದೇ ಪಲಾಯನ ಮಾಡುತ್ತಾರೆ. ಇಬ್ಬರು ಮಕ್ಕಳ ತಂದೆ. ಬೇರೇನೂ ಸಂಪಾದನೆ ಇಲ್ಲ. ಕೆಲಸ ಮಾಡುವ ಜಾಗದಲ್ಲಿ ದುಷ್ಟ ಆಡಳಿತವರ್ಗದ ಅನಾಚಾರದಿಂದ ನೊಂದು ಕೆಲಸಕ್ಕೆ ರಾಜೀನಾಮೆ ಕೊಡುವ ನಿರ್ಧಾರ ಮಾಡಿದರು. ಇದು ಬಹಳ ತಪ್ಪು ಎಂದು ಅವರ ಬಂಧು ಉಪದೇಶ ನೀಡಿದರು. ಕಾರಣ ಬಾಣಲೆಯಿಂದ ಬೆಂಕಿಗೆ ಬಿದ್ದರೆ ಸರಿಯೆ? ಅವರ ಸ್ನೇಹಿತರು ಮತ್ತೂ ಒಂದು ಸಲಹೆ ನೀಡಿದರು. ''ಭಗವಂತನನ್ನು ಆರಾಧಿಸು, ಪ್ರಾರ್ಥನೆ ಮಾಡು. ನಿನ್ನ ಸ್ವಂತ ಬುದ್ಧಿ ಉಪಯೋಗಿಸಬೇಡ.'' ಚಿಂತೆ ಮಾಡಿದರೆ ಲಾಭವಿಲ್ಲ. ನಷ್ಟವೇ ಹೆಚ್ಚು. ಪ್ರಾರ್ಥನೆ ಮಾಡುವುದು ಶ್ರೇಯಸ್ಕರವಾದ ಸುಂದರವಾದ ಸಕಾರಾತ್ಮಕ ಮಾರ್ಗ. ಪರಿಣಾಮ: ಕೆಲವೇ ದಿನಗಳಲ್ಲಿ ದುಷ್ಟ ಅಧಿಕಾರಿ ಬದಲಾಗಿ ಹೋದ. ಈ ವ್ಯಕ್ತಿಯ ಜೀವನ ಸುಗಮವಾಯಿತು.

ಭಗವದ್ಗೀತೆಯ ನಾಲ್ಕನೆಯ ಉಪದೇಶ, ''ಸತತವಾಗಿ ಕೆಲಸ ಮಾಡಬೇಕು.'' ಈ ಜಗತ್ತಿನಲ್ಲಿ ಚೆನ್ನಾಗಿ ಬದುಕಬೇಕಾದರೆ ಅನವರತ ಪರಿಶ್ರಮ ಆವಶ್ಯಕ. ಭಗವಾನ್ ಶ್ರೀಕೃಷ್ಣ ಭಗವದ್ಗೀತೆಯ ಕೆಲವು ಅಧ್ಯಾಯಗಳಲ್ಲಿ ಕರ್ಮದ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ. ನಿರಂತರವಾಗಿ ಕರ್ಮ ಮಾಡಬೇಕು. ಕೆಲಸ ಮಾಡಿದರೆ ಗೃಹಸ್ಥರ ಜೀವನ ಸುಗಮವಾಗುತ್ತದೆ. ಆಲಸ್ಯದಿಂದ ಶರೀರದಲ್ಲಿ ವ್ಯಾಧಿ, ಮನಸ್ಸಿನಲ್ಲಿ ಸಾವಿರಾರು ಚಿಂತೆಗಳು–ಇವೆಲ್ಲ ಬರುತ್ತವೆ. ಉಪನಿಷತ್ತು ಹೇಳುವಂತೆ ಈ ಜಗತ್ತಿನಲ್ಲಿ ೧೦೦ ವರ್ಷ ಬಹಳ ಚೆನ್ನಾಗಿ, ಕೆಲಸ ಮಾಡುತ್ತ ಬದುಕಬೇಕು. ಇದೇ ಆದರ್ಶ. ಸುಮ್ಮನೆ ನಕಾರಾತ್ಮಕ ಜೀವನ ನಡೆಸಿ ರೋಗ ಶೋಕಗಳಿಂದ ತುಂಬಿದ ವ್ಯಕ್ತಿತ್ವಗಳಾಗುವುದರಲ್ಲಿ ಅರ್ಥವಿಲ್ಲ.

ಕರ್ಮ ಎಂದರೆ ಕೆಲಸ. ಕರ್ಮ ಎಂದರೆ ಹಿಂದೆ ಮಾಡಿದ ಕೆಲಸ, ಚಿಂತೆ, ನುಡಿಗಳ ಸುಪ್ತ ಸಂಗ್ರಹ. ಈ ಸಂಗ್ರಹದಿಂದಾಗಿ ಜನ್ಮ, ದುಃಖ, ಮೃತ್ಯು. ಹಾಗಾಗಿ ಕರ್ಮ ಬಹಳ ಪ್ರಧಾನ. ಈ ಕರ್ಮ ನಮ್ಮ ಮೇಲೆ ಕೆಟ್ಟ ಪರಿಣಾಮ ಬೀರಬೇಕಿಲ್ಲ ಎಂದರೆ ನಿಃಸ್ವಾರ್ಥತೆ ಬೇಕು. ನಿಃಸ್ವಾರ್ಥತೆಯಿಂದ ಕರ್ಮ ಮಾಡಿದರೆ ಜೀವನದಲ್ಲಿ ಬರುವ ಅನೇಕ ದುಃಖಕಷ್ಟಗಳು ದೂರವಾಗುತ್ತವೆ. ಈ ಜೀವನ ರಣರಂಗದಲ್ಲಿ ಶತ್ರುಗಳನ್ನು ನಾವೇ ಸೃಷ್ಟಿಸಿಕೊಳ್ಳುತ್ತೇವೆ. ನಮ್ಮ ಸತ್ಕರ್ಮ ಪ್ರಾರ್ಥನೆ, ಸಾಧನೆ, ಯೋಗ, ಸೇವೆ ಇತ್ಯಾದಿಗಳು ಚಿರಕಾಲ ನಮ್ಮ ಬೆಂಬಲಕ್ಕೆ ಬರುತ್ತವೆ. ಹಿಂದೆ ಮಾಡಿದ ಕೆಟ್ಟ ಕರ್ಮಗಳ ಫಲ ಸಿಗದಂತೆ ಆ ಸಂಚಿತವಾದ ಕರ್ಮಗಳನ್ನು ನಾಶಮಾಡುತ್ತವೆ.

ಹಾಗಾಗಿ ಶ್ರೀಕೃಷ್ಣನ ಪಂಚಮ ಉಪದೇಶ ಸತತವೂ ಕರ್ಮ ಮಾಡು ಎಂದು. ಕರ್ಮದಿಂದಲೇ ಕರ್ಮಬಂಧನದಿಂದ ಮುಕ್ತಿ. ಈ ಕರ್ಮಬಂಧನದಿಂದ ಜೀವನದಲ್ಲಿ ಕಷ್ಟ ದುಃಖ ಗೃಹಸ್ಥ ಜೀವನದ ಸಮಸ್ಯೆಗಳು ಏನೇ ಇರಲಿ, ಭಗವಂತನನ್ನು ಹಿಡಿದುಕೊಂಡು ಮುಂದೆ ಹೋದರೆ ಶಾಂತಿ, ಆನಂದ.

ಜಗತ್ತಿನಲ್ಲಿ ಸರ್ವದಾ ಯಾರಿಗೂ ದುಃಖಕಷ್ಟಗಳು ಇರುವುದಿಲ್ಲ. ಅನೇಕ ವೇಳೆ ನಮ್ಮ ಕಷ್ಟಗಳು ಲಘುವಾದರೂ ನಾವು ಚಿಂತೆ, ಅಶಕ್ತತೆ ಇತ್ಯಾದಿ ಕಾರಣಗಳಿಂದ ದೊಡ್ಡದಾಗಿ ಮಾಡಿಕೊಳ್ಳುತ್ತೇವೆ. ಈ ಜಗತ್ತು ಶಾಂತಿಯ ಸ್ಥಳವೂ ಹೌದು. ಈ ಶಾಂತಿ ನಮ್ಮದಾಗಬೇಕು. ಅದಕ್ಕೆ ನಾವು ಮಾಡಬೇಕಾಗಿರುವುದು ಒಂದೆ. ನಿಸ್ವಾರ್ಥ ಕರ್ಮ. ನಮ್ಮ ಸಮಸ್ಯೆಗಳಿಗೆ ಕಾರಣ ನಾವೇ. ಈ ಸಮಸ್ಯೆಗಳನ್ನು ನಾವೇ ಪರಿಹರಿಸಿಕೊಳ್ಳಬಲ್ಲೆವು. ಇದು ಭಗವದ್ಗೀತೆಯ ಪಾಠ.

ಸಮಸ್ಯೆಗಳನ್ನು ಎದುರಿಸಲು ಸರ್ವದಾ ಸಿದ್ಧರಾಗಿರುವುದು ಒಂದು ಹಂತ. ಅನವರತ ಹೋರಾಡುವುದು ಎರಡನೆಯ ಹಂತ. ಅದೆಲ್ಲದರ ಜೊತೆಗೆ ಮುಂದೆ ಉದ್ಭವಿಸಲಿರುವ ಸಮಸ್ಯೆಗಳ ಮೂಲವನ್ನೇ ಕಿತ್ತೆಸೆಯುವುದು ಮತ್ತೊಂದು ಹಂತ.

ಯುದ್ಧ ಒಂದು ಕರ್ಮ. ಕರ್ಮದಿಂದ ದುಃಖ ಸುಖ ಎರಡೂ ಉಂಟು. ಈ ಯುದ್ಧವೆಂಬ ಕರ್ಮವನ್ನು ಜಯ ಪರಾಜಯಗಳ ಚಿಂತೆ ಬಿಟ್ಟು ಮಾಡಿದರೆ ಭಗವಂತನ ಕೃಪೆ ನಿಶ್ಚಿತ. ಆಗ ಮನೆಯಲ್ಲಿ ಶಾಂತಿ.

ಕೊನೆಯದಾಗಿ, ಭಗವದ್ಗೀತೆ ಒಂದು ಸರ್ವತೋಮುಖ ಉನ್ನತಿಯ ಮಾರ್ಗ ತಿಳಿಸುವ ಗ್ರಂಥ. ಈ ದಿವ್ಯಗ್ರಂಥ. ಈ ದಿವ್ಯಗ್ರಂಥ ತೋರಿಸುವ ಮಾರ್ಗ ಉತ್ಸಾಹದಿಂದ, ಧೈರ್ಯದಿಂದ, ಸಾಹಸದೊಂದಿಗೆ ಸಮಸ್ಯೆಗಳನ್ನು ಎದುರಿಸುವ ಮಾರ್ಗ. ಅಷ್ಟೇ ಅಲ್ಲ, ಸಮಸ್ಯೆಗಳ ಮೂಲವನ್ನೇ ನಾಶಮಾಡುವ ಮಾರ್ಗವನ್ನೂ ಗೀತಾಮಾತೆ ತೋರಿಸುತ್ತಾಳೆ. ಜೀವನವನ್ನು ಸುಖಕರವಾಗಿ ನಡೆಸಲು ಸತತ ಪ್ರಯತ್ನ, ಶಿಸ್ತು, ದೃಢತೆ, ಸಾಹಸಿಕತೆ, ಮತ್ತು ಕರ್ಮಪ್ರವಣತೆ ಶ್ರೇಷ್ಠ ಸಾಧನಗಳು.